ಕನ್ನಡಪ್ರಭ

## ಕ್ರಿಕೆಟ್: ಫೈನಲ್‌ಗೆ ಜೈನ್, ಪ್ರೆಸಿಡೆನ್ಸಿ ತಂಡಗಳು

ಬೆಂಗಳೂರು: ಹೆರಾನ್ಸ್ ಕ್ರಿಕೆಟ್ ಕ್ಲಬ್ ಆಯೋಜಿಸಿರುವ ಅಂತರ್ ಕಾಲೇಜು ಕ್ರಿಕೆಟ್ ಪಂದ್ಯಾವಳಿಯಲ್ಲಿ ಜೈನ್(ವಿ.ವಿ.ಪುರಂ) ಹಾಗೂ ಪ್ರೆಸಿಡೆನ್ಸಿ ಕಾಲೇಜು ತಂಡಗಳು ಫೈನಲ್ ಹಂತ ಪ್ರವೇಶಿಸಿದೆ. ಸೋಮವಾರ ನಡೆದ ಸೆಮಿಫೈನಲ್ಸ್ ಪಂದ್ಯದಲ್ಲಿ ಜೈನ್(ವಿ.ವಿ.ಪುರಂ) ತಂಡವು ಜೈನ್(ಜೆ.ಸಿ.ರಸ್ತೆ) ಕಾಲೇಜು ತಂಡದ ವಿರುದ್ಧ 35ರನ್‌ಗಳ ಜಯ ಸಾಧಿಸಿದೆ. ಮೊದಲು ಬ್ಯಾಟಿಂಗ್ ನಡೆಸಿದ ಜೈನ್(ವಿ.ವಿ.ಪುರಂ) ತಂಡ 30 ಓವರ್‌ಗಳಲ್ಲಿ 5 ವಿಕೆಟ್ ಕಳೆದುಕೊಂಡು 215 ರನ್ ಗಳಿಸಿತು. ಈ ಮೊತ್ತವನ್ನು ಬೆನ್ನತ್ತಿದ ಜೈನ್(ಜೆ.ಸಿ.ರಸ್ತೆ) ತಂಡ 30 ಓವರ್‌ಗಳಲ್ಲಿ 181 ರನ್‌ಗಳಿಸಿ ಸರ್ವಪತನಗೊಂಡಿತು. ಎರಡನೇ ಸೆಮಿಫೈನಲ್ ಪಂದ್ಯದಲ್ಲಿ ಪ್ರೆಸಿಡೆನ್ಸಿ ಕಾಲೇಜು ತಂಡ ಸುರಾನಾ ಕಾಲೇಜು ತಂಡದ ವಿರುದ್ಧ 17 ರನ್‌ಗಳ ಜಯ ದಾಖಲಿಸಿತು. ಮೊದಲು ಬ್ಯಾಟಿಂಗ್ ನಡೆಸಿದ ಪ್ರೆಸಿಡೆನ್ಸಿ ಕಾಲೇಜು ತಂಡವು ನಿಗದಿತ 30 ಓವರ್‌ಗಳಲ್ಲಿ 8 ವಿಕೆಟ್ ಕಳೆದುಕೊಂಡು 167 ರನ್‌ಗಳಿಸಿತು. ಈ ಮೊತ್ತವನ್ನು ಬೆನ್ನತ್ತಿದ ಸುರಾನಾ ಕಾಲೇಜು ತಂಡ 28 ಓವರ್‌ಗಳಲ್ಲಿ 151 ರನ್‌ಗಳಿಸಿ ಆಲೌಟ್ ಆಯಿತು.